ಅಮ್ಮಿಯನ್ನು ಒಲಿಸಿಕೊಳ್ಳಬೇಕಾದರೆ ಸುರಯ್ಯ ಆಂಟಿ ಒಂದು ಟ್ರಂಪ್ ಕಾರ್ಡನ್ನು ಒಗೆದರು.

'ನೋಡು ನವೀದ ನಿನ್ನ ತಂಗಿ ರಾಹತ್ ನನ್ನ ಓರಗಿತ್ತಿ. ಅವಳು ಇಲ್ಲಿ ನೆಮ್ಮದಿಯಾಗಿ ಸಂಸಾರ ಮಾಡುತ್ತಿಲ್ಲವಾ? ಹಾಗೆಯೇ ನಿನ್ನ ಮಗಳಲ್ಲ ನನ್ನ ಮಗಳು ಅಂತ ನೋಡ್ಕೋತೀನಿ. ರಾಹತ್‌ನ ಕೇಳಿ ನೋಡು ನನ್ನ ಮಗ ಎಂಥಾ ಒಳ್ಳೆಯವನು ಅಂತ, ಅವನ ವಯಸ್ಸಿನ ಹುಡುಗರ ಯಾವ ಚಟಗಳು ಕೂಡ ಅವನಿಗೆ ಇಲ್ಲ. ಚಿನ್ನದಂತ ಹುಡುಗ' ಎಂದು ಎಲ್ಲಾ ವಿಶೇಷಣಗಳನ್ನು ಸೇರಿಸಿ ನಿನ್ನ ತಾರೀಫು ಮಾಡಿ ನನ್ನ ಅಮ್ಮಿಯ ಮನವನ್ನು ಒಲಿಸಿಕೊಂಡು ಬಿಟ್ಟಳು. ಅಂತೂ ಇಡೀ ಖಾನ್‌ದಾನಿನಲ್ಲಿ ನಾನು ನಿನಗೆ ಮೀಸಲು ಎಂದು ಸುದ್ದಿ ಹರಡಿತು. ನನ್ನ ಮೊದಲನೇ ವರ್ಷದ ಪಿಯುಸಿ ಪರೀಕ್ಷೆ ಮುಗಿದ ಮೇಲೆ ನಿನ್ನ ಜೊತೆಯಲ್ಲಿ ನನ್ನ ಮಂಗನಿ ಕೂಡ ನಡೆದುಹೋಯಿತು. ಹುಡುಗನ ತಾಯಿ ಹುಡುಗಿಯ ಬೆರಳಿಗೆ ಉಂಗುರ ತೊಡಿಸುವ ಸಂಪ್ರದಾಯವನ್ನು ಬದಿಗೆ ಸರಿಸಿ ನಿನ್ನನ್ನು ಮತ್ತು ನನ್ನನ್ನು ಒಂದೇ ಸೋಫಾದಲ್ಲಿ ಅಕ್ಕಪಕ್ಕದಲ್ಲೇ ಕೂರಿಸಿ ಉಂಗುರವನ್ನು ನೀನೇ ನಿನ್ನ ಕೈಯಾರೆ ನನ್ನ ಬೆರಳಿಗೆ ತೊಡಿಸಿದ್ದೂ ಅಲ್ಲದೆ ನಾನು ಕೂಡ ಸಿಕ್ಕಾಪಟ್ಟೆ ನಾಚಿಕೆಯಿಂದ ಮುದುರಿಕೊಂಡು ನಿನ್ನ ಕೈ ಬೆರಳಿಗೆ ಉಂಗುರ ತೊಡಿಸಿದ್ದೂ ಆಯಿತು.

ಆ ನಂತರದಲ್ಲಿ ನನ್ನ ತರಬೇತಿಯ ಅವಧಿ ಆರಂಭವಾಯಿತು. ಸುರಯ್ಯ ಆಂಟಿ ಆಗಾಗ್ಗೆ ಫೋನ್ ಮಾಡಿ ಅಮ್ಮಿಯನ್ನು ಕೇಳುತ್ತಿದ್ದರು—

'ನಬೀಲ ಐದು ಹೊತ್ತಿನ ನಮಾಜ್ ಮಾಡುತ್ತಾಳೋ? ರಮಜಾನಿನಲ್ಲಿ ಪೂರ್ತಾ ಉಪವಾಸ ಇದ್ದಾಳಾ? ಕುರಾನನ್ನು ಎಷ್ಟು ಸಾರಿ ಪಾರಾಯಣ ಮಾಡ್ತಾಳೆ? ಅವಳಿಗೆ ಒಂದಿಷ್ಟು ಅಡುಗೆ ಪಡಿಗೆ ಕಲಿಸಬೇಕಿತ್ತು ನವೀದ.' ಅಮ್ಮಿ ಕೂಡಾ ಸಂಭ್ರಮದಿಂದ ಉತ್ತರಿಸುತ್ತಿದ್ದರು. ಹಬ್ಬಗಳು ಬಂದಾಗ ಮತ್ತು ನನ್ನ ಬರ್ತಡೇ ಬಂದಾಗ ಸುರಯ್ಯ ಆಂಟಿ ನನಗಾಗಿ ತುಂಬಾ ಒಳ್ಳೆಯ ಗಿಫ್ಟ್‌ಗಳನ್ನು ತರುತ್ತಿದ್ದರು. ನನಗೆ ತೊಡಿಸಿ ಯಾರ ಕಣ್ಣು ಕೂಡಾ ತಾಗಬಾರದೆಂದು ನೆಟಿಕೆ ಮುರಿಯುತ್ತಿದ್ದರು. ಒಳ್ಳೆಯ ಸುದ್ದಿಗಳು ಬರತೊಡಗಿದವು. ನಿನಗೆ ಕ್ಯಾಂಪಸ್ ಸೆಲೆಕ್ಷನ್ ಆಗಿತ್ತು. ಆರು ತಿಂಗಳಿನಲ್ಲಿಯೇ ಇನ್ನೊಂದು ಒಳ್ಳೆಯ ಸುದ್ದಿ ಅಂದರೆ ನೀನು ಕೆಲಸಕ್ಕೆ ಸೇರಿದ್ದು ಮತ್ತು ಒಂದು ತಿಂಗಳ ಸಂಬಳ ಪಡೆದೆ ಎಂಬುದು. ಸುರಯ್ಯ ಆಂಟಿ ಮತ್ತೆ ನಮ್ಮ ಮನೆಗೆ ಬಂದು ಸಿಹಿ ಹಂಚಿದರು. ಎಲ್ಲವೂ ಚೆನ್ನಾಗಿ ಹಾಗೂ ಸಮರ್ಪಕವಾಗಿ ನಡೆಯುತ್ತಿತ್ತು.

ಈ ನಡುವೆ ಯಾವುದಾದರೂ ಕೌಟುಂಬಿಕ ಸಮಾರಂಭಗಳು ನಡೆದರೆ ಅಲ್ಲಿ ನನ್ನ ಹಾಜರಿ ಕಡ್ಡಾಯವಾಗಿ ಇರುವಂತೆ ನೋಡಿಕೊಳ್ಳಲಾಗುತ್ತಿತ್ತು. ಏಕೆಂದರೆ, ಎಲ್ಲಾ ಸಮಾರಂಭಗಳಲ್ಲಿ ನೀನು ಕೂಡ ಇರುತ್ತಿದ್ದೆ. ಮತ್ತು ನೀನು ನನ್ನ ಮಂಗೇತರ್ ಆಗಿದ್ದರಿಂದ ನಮ್ಮಿಬ್ಬರ ನಡುವೆ ನಡೆಯುತ್ತಿದ್ದ ಕಣ್ಣು ನೋಟದ ವಿನಿಮಯವನ್ನು ಮುಗುಳುನಗೆಯ ಲಾಸ್ಯವನ್ನು ಅಲ್ಲಿ ಇಲ್ಲಿ ನಿಂತು ಒಬ್ಬರನ್ನೊಬ್ಬರು ನೋಡುತ್ತಿದ್ದ ಕಣ್ಣಾಮುಚ್ಚಾಲೆಯಾಟವನ್ನು ಮತ್ತು ಪ್ರೀತಿ ತುಂಬಿ ತುಳುಕುತ್ತಿದ್ದ ಆ ಹೊತ್ತಿನ ನಮ್ಮ ಮಂಗಾಟಗಳನ್ನು ಕಂಡರೂ ಹಿರಿಯರು ಗಮನಿಸದಂತೆ ಉದಾರವಾಗಿಯೇ ನಡೆದುಕೊಳ್ಳುತ್ತಿದ್ದರು. ಆದರೆ, ನನ್ನ ಅಮ್ಮಿ ಮಾತ್ರ ಯಾವಾಗಲೂ ವಿಶೇಷ ಎಚ್ಚರಿಕೆಯಿಂದ ನನ್ನನ್ನು ಕಾವಲು ಕಾಯುವ ಕೆಲಸಕ್ಕೆ ತನ್ನನ್ನು ತಾನೇ ನಿಯುಕ್ತಿಗೊಳಿಸಿಕೊಂಡಳು. ಹೀಗಾಗಿ ಹಿರಿಯರು ನಮ್ಮ ಗೆಳೆತನವನ್ನು ಮತ್ತು ಸಾಮೀಪ್ಯವನ್ನು ತಮ್ಮದೇ ಆದ ಕ್ರಮದಲ್ಲಿ ಉತ್ತೇಜಿಸುತ್ತಿದ್ದರು ಮತ್ತು ಹದ್ದು ಮೀರಿದ ನಡವಳಿಕೆ ನಮ್ಮಲ್ಲಿ ಮೂಡಿ ಎಲ್ಲೆ ಮೀರಬಾರದು ಎಂಬ ಸಹಜ ಆತಂಕ ಕೂಡ ಅಲ್ಲಿತ್ತು.

ಆದರೆ, ಅದು ನನ್ನ ತರಬೇತಿಯ ಅವಧಿಯಾಗಿತ್ತು. ಹೀಗಾಗಿ ಯಾರನ್ನಾದರೂ ಅರ್ಥಮಾಡಿಕೊಳ್ಳಬೇಕಾದರೆ ಆತನೊಡನೆ ಸಮಯವನ್ನು ಹಂಚಿಕೊಳ್ಳಬೇಕಾಗುತ್ತದೆ ಎಂಬ ಆಲೋಚನೆಯೊಂದಿಗೆ ಹಿರಿಯರು ನಮಗೆ ಒಂದಿಷ್ಟು ಅನ್ಯೋನ್ಯತೆಯನ್ನು ಕರುಣಿಸುತ್ತಿದ್ದರು.